ಅಪರಿಮಿತ, ನಿರಂತರ ಪ್ರಕ್ರಿಯೆಯೂ ಹೌದು. ವಾಸ್ತವದಲ್ಲಿ ಒಬ್ಬನ ಕೇಶ ಶೈಲಿ, ಡ್ರೆಸ್, ವ್ಯಕ್ತಿತ್ವ, ಮನೋಧರ್ಮ, ಗುಣ... ಎಲ್ಲವೂ ಇನ್ನೊಬ್ಬನಿಗಿಂತ ಭಿನ್ನವಾಗಿರುತ್ತದೆ. ಹಾಗೆಯೇ ರಿಯಾಜ್ ತಂತ್ರಗಾರಿಕೆಯೂ ಭಿನ್ನ. ಇದನ್ನು ಯಾರಿಂದಲೂ ಪಡೆಯಲು ಅಥವಾ ಕೊಡಲು ಸಾಧ್ಯವಿಲ್ಲ. ನಾವೇ ಕಲಿಯಬೇಕು. ನಾನು ದಿನಕ್ಕೆ 4–5 ಗಂಟೆ ಕಾಲ ತಾಲೀಮು ನಡೆಸುತ್ತೇನೆ. ಇದರ ಜೊತೆಗೆ ಕೇಳ್ಮೆಯೂ ಮುಖ್ಯ. ವಿದ್ವಾಂಸರ ಸಂಗೀತವನ್ನು ಸತತವಾಗಿ ಕೇಳುವ ಮೂಲಕ ನಾವು ಬಹುಬೇಗ ಹೊಸದನ್ನು ಕಲಿತು ಮುಂದುವರಿಯಬಹುದು.

**◆ ಉಸಿರು ನಿಯಂತ್ರಣ ಸಾಮರ್ಥ್ಯ (Breath control) ಸಂಗೀತಗಾರರಿಗೆ ಬಹಳ ಅಗತ್ಯ. ಇದನ್ನು ಸಮರ್ಥವಾಗಿ ನಿರ್ವಹಿಸಲು ನೀವು ಕಂಡುಕೊಂಡ ಉಪಾಯಗಳೇನು?**

ಸತತ ಹಾಗೂ ನಿರಂತರ ಅಭ್ಯಾಸದಿಂದ ಉಸಿರು ನಿಯಂತ್ರಣ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬಹುದು. ಇದರ ಜೊತೆಗ ಯೋಗ, ಪ್ರಾಣಾಯಾಮ, ಧ್ಯಾನ ಎಲ್ಲವೂ ಸಂಗೀತ ಸಾಧನೆಗೆ ಸಹಕಾರಿಯಾಗುತ್ತದೆ. ಹಾಗೆ ನೋಡಿದರೆ ಬ್ರೀದಿಂಗ್ ಕೂಡ ಒಂದು ರೀತಿಯ ವ್ಯಾಯಾಮವೇ. ಆರೋಗ್ಯ, ಏಕಾಗ್ರತೆಗೆ ಯೋಗದ ಜೊತೆಗೆ ಪ್ರಾಣಾಯಾಮವೂ ಸಹಕಾರಿ. ಪ್ರತಿನಿತ್ಯ ರಿಯಾಜ್ ಜೊತೆಗೆ ಯೋಗ, ಪ್ರಾಣಾಯಾಮಗಳಿಗೂ ನಾನು ಸಮಯ ಹೊಂದಿಸಿಕೊಳ್ಳುತ್ತೇನೆ.

**◆ ನಿಮಗೆ ದೊರೆತ ಅವಕಾಶಗಳಲ್ಲಿ 'ಸುವರ್ಣಾವಕಾಶ' ಎನಿಸಿದ್ದು ಯಾವುದು?**

ನನಗೆ 16 ವರ್ಷ ಇರುವಾಗ ದೆಹಲಿಯ ಇಂಡಿಯಾ ಹ್ಯಾಬಿಟ್ಯಾಟ್ ಸೆಂಟರ್‌ನಲ್ಲಿ ಕಛೇರಿ ನೀಡಿದೆ. ಅಲ್ಲಿ ಕೇಳುಗರಾಗಿ ಉಸ್ತಾದ್ ಜಾಕಿರ್ ಹುಸೇನ್, ಅಮ್ಜದ್ ಅಲಿಖಾನ್, ಅಲ್ಲಾರಖಾಖಾನ್, ಅಸಾದ್ ಅಲಿಖಾನ್, ಉಸ್ತಾದ್ ಸುಲ್ತಾನ್ ಖಾನ್ ಮುಂತಾದವರಿದ್ದು ಕಛೇರಿ ಬಳಿಕ ಮೆಚ್ಚುಗೆಯ ಮಾತನಾಡಿದ್ದು ನನಗೆ ಅತ್ಯಂತ ಸುಮಧುರ ಕ್ಷಣ ಎನಿಸಿದೆ. ಕಿಶೋರಿ ತಾಯಿಯವರ 60ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಪುಣೆಯಲ್ಲಿ ನಾನು, ಕಲಾಪಿನಿ ಕೊಂಕಾಲಿ (ಪಂ. ಕುಮಾರ ಗಂಧರ್ವರ ಮಗಳು) ಹಾಡಿದ್ದು, ಪುಣೆಯ ಸವಾಯ್ ಗಂಧರ್ವ ಸಂಗೀತೋತ್ಸವದಲ್ಲಿ 2013ರಲ್ಲಿ ಹಾಡಿದ್ದು, ಮುಂಬಯಿಯ ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ನೀಡಿದ ಕಛೇರಿ, 2003ರಲ್ಲಿ ಲಂಡನ್‌ನಲ್ಲಿ ಮೊದಲ ಬಾರಿಗೆ ಕಛೇರಿ ನೀಡಿದ್ದು, ತಂದೆ ಅಜಯ್ ಚಕ್ರವರ್ತಿ ಅವರೇ ಹಾರ್ಮೋನಿಯಂ ಸಹಕಾರ ನೀಡಿದ್ದು, ಕ್ಯಾಲಿಫೋರ್ನಿಯಾದ ಸ್ಪ್ರಿಂಗ್ ಫೆಸ್ಟಿವಲ್ ಆಫ್ ಮ್ಯೂಸಿಕ್‌ನಲ್ಲಿ, ಲಾಸ್ ಏಂಜಲೀಸ್‌ನಲ್ಲಿ ಪರಂಪರಾ ಸಂಗೀತ ಮಹೋತ್ಸವಗಳಲ್ಲಿ ಭಾಗವಹಿಸಿದ್ದು ಎಲ್ಲವೂ ನನಗೆ ಸಿಕ್ಕಿದ 'ಸುವರ್ಣಾವಕಾಶ'ಗಳೇ.



**◆ ಶಾಸ್ತ್ರೀಯ ಸಂಗೀತದ ಜೊತೆಗೆ ಬಾಲಿವುಡ್ ಸಿನಿಮಾಗಳಲ್ಲೂ ಹಾಡಿದ್ದೀರಿ. ಸಿನಿಮಾ ಸಂಗೀತದೊಂದಿಗೆ ನಿಮ್ಮ ನಂಟು ಬೆಳೆದಿದ್ದು ಹೇಗೆ?**

ಕೆಲವೊಂದು ಹಿಂದಿ ಸಿನಿಮಾಗಳಲ್ಲಿ ಹಾಡಿದ್ದೇನೆ. ಜನಪ್ರಿಯ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ನಿರ್ದೇಶನದಲ್ಲಿ 'ವಾಟರ್' ಸಿನಿಮಾ, 'ಗುಲಾಬ್ ಗ್ಯಾಂಗ್', 'ತೇರಾ ಖ್ಯಾಲ್', 'ಕಾಗಾ'.. ಹೀಗೆ ಕೆಲವು ಸಿನಿಮಾಗಳಲ್ಲಿ ಹಾಡಿದ್ದೇನೆ. ಮಲಯಾಳಂ, ತಮಿಳು ಸಿನಿಮಾಗಳಲ್ಲೂ ಹಾಡಿರುವೆ. ಸಿನಿಮಾ ಗಾಯನ ಒಂದು ಪ್ಯಾಶನ್ ಅಷ್ಟೆ. ಫ್ಯೂಷನ್ ಸಂಗೀತವನ್ನೂ ಇಷ್ಟಪಟ್ಟು ಕೆಲವು ಕಛೇರಿಗಳಲ್ಲಿ ಹಾಡಿದ್ದಿದೆ. ಫ್ಯೂಷನ್ ಎಂಬುದು ಎರಡು ವಿಭಿನ್ನ ಸಂಗೀತ ಸಂಸ್ಕೃತಿಗಳ ಸಮಾಗಮ ಆಗಿರುವುದರಿಂದ ಅಲ್ಲೂ ಒಂದು ರೀತಿಯ ಥ್ರಿಲ್ ಇರುತ್ತೆ. ಗಜಲ್, ಕವಾಲಿ, ಪಾಶ್ಚಾತ್ಯ ಸಂಗೀತ, ವಾದ್ಯ ಸಂಗೀತ ಎಲ್ಲವನ್ನೂ ಇಷ್ಟಪಡ್ತೇನೆ.



**◆ ಪಾರಂಪರಿಕ ಸಂಗೀತದ ಉಳಿವಿಗೆ ನೀವು ಕಂಡುಕೊಂಡ ಹಾದಿ ಯಾವುದು?**

ದೇಶದಲ್ಲಿರುವ ಪ್ರತಿಭಾನ್ವಿತ ಮಹಿಳಾ ಕಲಾವಿದರಿಗಾಗಿಯೇ 'ಸಖಿ' ಎಂಬ ಸಂಘಟನೆ ಕಟ್ಟಿದ್ದೇನೆ. ಆ ಮೂಲಕ ಭಾರತೀಯ ಶಾಸ್ತ್ರೀಯ ಸಂಗೀತವನ್ನು ಪ್ರಚಾರಗೊಳಿಸುವ ಕೆಲಸ ನಡೆಯುತ್ತಿದೆ. ದೇಶದ ಮಾತೆಯರಿಗಾಗಿ 'ಸೆಲೆಬ್ರೇಟ್ ವುಮನ್‌ಹುಡ್' ಕಾರ್ಯಕ್ರಮ ನಡೆಸಿ ಸಂಗೀತವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ. ಇದಕ್ಕಾಗಿ 2015ರಿಂದ ಮುಂಬಯಿ ಕಲಾಮಂದಿರದಲ್ಲಿ ಪ್ರತಿವರ್ಷವೂ ಕಛೇರಿ ಆಯೋಜಿಸುತ್ತಿದ್ದೇವೆ.

**◆ ನಿಮ್ಮ ಊರು ಕೋಲ್ಕತ್ತದಲ್ಲಿಯೇ ನಿಮ್ಮ ಮೊದಲ ಕಛೇರಿ. ನಂತರ ಬೆಂಗಳೂರಿನಲ್ಲಿ ನಿಮ್ಮ ಪೂರ್ಣಪ್ರಮಾಣದ ಕಛೇರಿ ನಡೆಯಿತು. ಇಪ್ಪತ್ತೆಂಟು ವರ್ಷ ಹಿಂದೆ ಇಲ್ಲಿ ಹಾಡಿದ ಅನುಭವ ನೆನಪಿಸಿಕೊಳ್ಳುತ್ತೀರಾ?**

ಬೆಂಗಳೂರಿನಲ್ಲಿ ನೀಡಿದ ಕಛೇರಿ ನನ್ನ ಸಂಗೀತ ಜೀವನದಲ್ಲಿ ಸ್ಮರಣಾರ್ಹ. ನನಗಾಗ 11 ವರ್ಷ. ಮೊದಲ ಬಾರಿಗೆ ಒಬ್ಬಳೇ ಕೋಲ್ಕತ್ತ ಏರ್‌ಪೋರ್ಟ್‌ನಿಂದ ಬೆಂಗಳೂರಿಗೆ ಬಂದಿದ್ದೆ. ಬೆಂಗಳೂರಿನ ಕೆ.ಸಿ. ದಾಸ್ ಕುಟುಂಬಕ್ಕೂ ನಮಗೂ ಹತ್ತಿರದ ನಂಟು. ಅವರೆಲ್ಲ ನನ್ನನ್ನು ಕರೆದೊಯ್ಯಲು ಏರ್‌ಪೋರ್ಟ್‌ಗೆ ಬಂದಿದ್ದರು. ಚರ್ಚ್‌ಸ್ಟ್ರೀಟ್‌ನಲ್ಲಿರುವ ಅವರ ಮನೆಯಲ್ಲೇ ಎರಡು ದಿನ ತಂಗಿದ್ದೆ. ಅಲ್ಲಿ ಸಿಹಿತಿಂಡಿ ಸವಿದದ್ದು, ಕಿಡ್ಸ್‌ಕೆಂಪ್‌ಗೆ ಹೋಗಿ ಬಟ್ಟೆ ಖರೀದಿಸಿದ್ದು ಎಲ್ಲವೂ ಸವಿಸವಿ ನೆನಪು. ಕಛೇರಿಯಲ್ಲಿ ಹಾಡಿದ ಭಾಗೇಶ್ರೀ, ತೋಡಿ ರಾಗಗಳು ಇಂದಿಗೂ ಇಷ್ಟ. ಬೆಂಗಳೂರಿನಲ್ಲಿ ಒಳ್ಳೆಯ ಸಂಗೀತದ ವಾತಾವರಣವಿದೆ. ಕೇಳುಗರ ಸ್ಪಂದನ ಚೆನ್ನಾಗಿದೆ. ಕಳೆದ 25 ವರ್ಷಗಳಿಂದ ಪ್ರತಿ ವರ್ಷವೂ ತಪ್ಪದೇ ಬೆಂಗಳೂರಿಗೆ ಬರುತ್ತಿದ್ದೇನೆ. ಐ ಲವ್ ದಿ ಸಿಟಿ...! ■